ಇಂದು ದಿ:**02-02-2026** ರಂದು ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಶ್ರೀ ಕೆ.ಆರ್ ವಕೀಲರಿಂದ 1 ರಿಂದ 6, 19(ಎ ದಿಂದ ಡಿ) ಪ್ರತಿವಾದಿಗಳ ಪರಃ**

ನಾನು 5 ನೇ ತರಗತಿಯವರೆಗೆ ಶಾಲೆ ಕಲಿತ್ತಿದ್ದೇನೆ. ನನ್ನ ಜನ್ಮ ದಿನಾಂಕಃ01-06-1960 ಇರುತ್ತದೆ. ನನಗೆ ಕನ್ನಡ ಅಷ್ಟು ಓದಲು ಮತ್ತು ಬರೆಯಲು ಬರುವುದಿಲ್ಲ. ನಾನು ಹುಟ್ಟಿ ಬೆಳೆದಿದ್ದು, ಹಿಂಡಸಗಟ್ಟೆ ಗ್ರಾಮದಲ್ಲಿ ಎಂದರೆ ಸರಿ. ಈಗಲೂ ನಾನು ಸದರಿ ಗ್ರಾಮದ ವಾಸಿ ಎಂದರೆ ಸರಿ. ನಾನು ವ್ಯವಸಾಯ ಹೊರತುಪಡಿಸಿ, ಬೇರೆ ಯಾವುದೇ ಉದ್ಯೋಗ ಮಾಡುವುದಿಲ್ಲ. ವಾದಿಯರು ನಂದಿಗುಡಿ ಗ್ರಾಮದಲ್ಲಿ ವಾಸ ಇದ್ದಾರೆ. ಸಾಕ್ಷಿಗೆ ನ್ಯಾಯಾಲಯದಲ್ಲಿ ಹಾಜರು ಇರುವ 2 ನೇ ಪ್ರತಿವಾದಿಯನ್ನು ತೋರಿಸಿ, ಇವರ ಹೆಸರು ಗೊತ್ತಾ ಎಂದರೆ ಸಾಕ್ಷಿ ಚಂದ್ರಯ್ಯ ಎಂದು ಹೇಳುತ್ತಾರೆ. ಅವರು ಮಲ್ಲಾಪುರದಲ್ಲಿ ವಾಸ ಇರುತ್ತಾರೆ. 2 ನೇ ಪ್ರತಿವಾದಿಯ ತಂದೆಯ ಹೆಸರು ಕರಿಬಸಯ್ಯ ಎಂದು ಇರುತ್ತದೆ. ನನಗೆ ವಾದಿ ಮತ್ತು ಪ್ರತಿವಾದಿಯರ ಕುಟುಂಬದ ಬಗ್ಗೆ ಮಾಹಿತಿ ಇದೆ.

ನಂದಯ್ಯನ ಮಗಳು ಈರಮ್ಮಳ ಮಕ್ಕಳ ಹೆಸರು ನನಗೆ ಗೊತ್ತಿಲ್ಲ. ಕೊನೆಯ ಮಗಳ ಹೆಸರು ಬಸಮ್ಮ, ಅವಳಿಗೆ ರತ್ನಮ್ಮ ಮತ್ತು ರಿಂದಮ್ಮ ಎಂಬ ಇಬ್ಬರು ಮಕ್ಕಳು ಇರುತ್ತಾರೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ ನಾನು ತಿಳಿಸಿದ ವಂಶಾವಳಿಯನ್ನು 2 ನೇ ವಾದಿ ಹೇಳಿ ಬರೆಯಿಸಿದ್ದಾರೆ ಎಂದರೆ ಸಾಕ್ಷಿ ನಾನು ಹೇಳಿದ್ದೇನೆ ಎಂದು ಹೇಳುತ್ತಾರೆ. ನಾನು ವಾದಿಯರ ಮತ್ತು ಪ್ರತಿವಾದಿಯ ಕುಟುಂಬಕ್ಕೆ ಯಾವುದೇ ರೀತಿ ಸಂಬಂಧ ಇಲ್ಲ ಎಂದರೆ ಸರಿ. ವಾದಿಯರು ಮತ್ತು ಪ್ರತಿವಾದಿಯರು ನಂದಿಗುಡಿಯಲ್ಲಿ ವಾಸ ಇದ್ದರು, ನನಗೆ ಅವರ ಮನೆಯ ನಂಬರ್ ಹೇಳಲು ಆಗುವುದಿಲ್ಲ. ನಂದಿಗುಡಿಯಿಂದ ಹಿಂಡಸಗಟ್ಟೆ ಗ್ರಾಮ ಸುಮಾರು 5-6

ಕಿ.ಮೀ ಹಂತರದಲ್ಲಿ ಇದೆ ಎಂದರೆ ಸರಿ. ದಾವಾ ಜಮೀನು ಗೋವಿನಹಾಳನ ಸರ್ವೆ ನಂಬರ್ ನಲ್ಲಿ ಬರುತ್ತದೆ. ಗೋವಿನಹಾಳ ಮತ್ತು ಹಿಂಡಸಗಟ್ಟಿ ಗ್ರಾಮದ ಸರ್ವೆ ನಂಬರ್ ಗಳು ಅಕ್ಕ ಪಕ್ಕದಲ್ಲಿ ಬರುತ್ತವೆ. ನನ್ನ ಜಮೀನು ಹಿಂಡಸಗಟ್ಟಿಗೆ ಗ್ರಾಮದ ಸರ್ವೆ ನಂಬರ್ 67 ರಲ್ಲಿ ಬರುತ್ತದೆ. ನನ್ನ ಜಮೀನು ದಾವಾ ಆಸ್ತಿಯ ಪಕ್ಕದಲ್ಲಿ ಇದ್ದ ಬಗ್ಗೆ ತೋರಿಸಲು ನಾನು ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿ.

ನಾನು ನಂದಯ್ಯನ ಮಗ ಗುರುಶಾಂತನನ್ನು ನೋಡಿಲ್ಲ. ಹಾಲಯ್ಯನನ್ನು ನೋಡಿರುತ್ತೇನೆ. 1965-66 ರ ಇಸವಿಯಲ್ಲಿ ಆತನನ್ನು ನೋಡಿರುತ್ತೇನೆ. ಹಾಲಯ್ಯ ನಾಟಕದ ಕಲಾವಿದರು ಇದ್ದರು ಎಂದರೆ ಸಾಕ್ಷಿ ಮೊದಲು ಆ ವಿಷಯ ಗೊತ್ತಿಲ್ಲ ಎಂದು ಹೇಳಿ ನಂತರ ನಾಟಕ ಮಾಡುತ್ತಿರಲಿಲ್ಲ ಎಂದು ಹೇಳುತ್ತಾರೆ. ಹಾಲಯ್ಯ ನಾಟಕದ ಕಲಾವಿದ ಇದ್ದ ಕಾರಣ, ಆತ ನಂದಿಗುಡಿಯ ಗ್ರಾಮದಲ್ಲಿ ವಾಸ ಇರಲೇ ಇಲ್ಲ ಎಂದರೆ ಸರಿಯಲ್ಲ. ಹಾಲಯ್ಯ ಮತ್ತು ಗುರುಶಾಂತಯ್ಯ ಜಂಟಿಯಾಗಿ ದಾವಾ ಆಸ್ತಿಗಳನ್ನು ಅನುಭವಿಸುತ್ತಿದ್ದ ಬಗ್ಗೆ ನಾನು ದಾಖಲೆ ನೋಡಿಲ್ಲ, ಸಾಕ್ಷಿ ಅವರ ಅಣ್ಣನ ಹೆಸರಿಗೆ ದಾಖಲೆಗಳು ಇದ್ದವು ಎಂದು ಹೇಳುತ್ತಾರೆ. ನಾನು ನನ್ನ ಮುಖ್ಯ ವಿಚಾರಣೆಯ ಪ್ಯಾರ 4 ರಲ್ಲಿ ಜಂಜರ ನಂಬರ್ 218 ಎಂದು ಬರೆಯಿಸಿಲ್ಲ. ಸಾಕ್ಷಿಗೆ ನಿ.ಪಿ-6 ನ್ನು ತೋರಿಸಿ ಅದರ ಪ್ರಕಾರ ಹಾಲಯ್ಯ ತಂದೆ ನಂದಯ್ಯ ಈತನಿಂದ ಗುರುಶಾಂತಯ್ಯ ಈತನಿಗೆ ರೂ.100 ಕ್ಕೆ ಹಾಲಯ್ಯ ಮಾರಿದ ಬಗ್ಗೆ ನಮೂದು ಇದೆ ಎಂದರೆ ಸಾಕ್ಷಿ ಅದು ಸುಳ್ಳು ಎಂದು ಹೇಳುತ್ತಾರೆ. ಸಾಕ್ಷಿಗೆ 1943 ರ ಕ್ರಯಪತ್ರವನ್ನು ತೋರಿಸಿ, ಅದರ ಪ್ರಕಾರ ಹಾಲಯ್ಯ ಮಾರಿದ್ದಾನೆ ಎಂದರೆ ಸರಿಯಲ್ಲ. ಆಗಲೇ ಹಾಲಯ್ಯ ತನ್ನ ಹಿಸ್ಸೆಯನ್ನು ಮಾರಿದ್ದ ಕಾರಣ, ಆತನಿಗೆ ದಾವಾ ಆಸ್ತಿಗಳಲ್ಲಿ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. 1948 ರಲ್ಲಿ ಹಾಲಯ್ಯ ಪುನಃ ಗಂಟಿ ಭರಮಗೌಡ ತಂದೆ ಬಸಪ್ಪ ಎನ್ನುವವರಿಗೆ ಸರ್ವೆ ನಂಬರ್

67 ರಲ್ಲಿ ಎರಡು ಬಾರಿ ಜಮೀನನ್ನು ಮಾರಾಟ ಮಾಡಿದರು ಎಂದರೆ ಸರಿಯಲ್ಲ. ನಂತರದಲ್ಲಿ ಗುರುಶಾಂತಯ್ಯ ಮತ್ತು ಕರಿಬಸಯ್ಯ ಸೇರಿ, ದಿನಾಂಕಃ06-12-1948 ರಂದು ಈ ಜಮೀನನ್ನು ಖರೀದಿ ಮಾಡಿದರು ಎಂದರೆ ಸರಿಯಲ್ಲ. ನಂತರದಲ್ಲಿ ಈ ಎರಡೂ ಖರೀದಿ ಪತ್ರಗಳ ಪ್ರಕಾರ ಪೂರ್ಣ 12 ಎಕರೆ 20 ಗುಂಟೆ ಗುರುಶಾಂತಯ್ಯನ ಹೆಸರಿಗೆ ಆಯಿತು ಎಂದರೆ ಸರಿಯಲ್ಲ. ನನಗೆ ಈ ಎಲ್ಲಾ ವಿಷಯಗಳು ಗೊತ್ತಿದ್ದರೂ, ವಾದಿಗೆ ಅನುಕೂಲ ಮಾಡಲು ಸುಳ್ಳು ಪ್ರಮಾಣಪತ್ರ ಸಲ್ಲಿಸಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ ಯಾವ ತಾರೀಖಿನಂದು ಹಿಸ್ಸೆ ಕೇಳಲು ಹೋಗಿದ್ದೇವು ಎಂದು ಬರೆಯಿಸಿಲ್ಲ. ಹಾಲಯ್ಯ ಮತ್ತು ಗುರುಶಾಂತಯ್ಯ ಒಟ್ಟಿಗೆ ಜಮೀನುಗಳನ್ನು ಸಾಗುವಳಿ ಮಾಡುತ್ತಿದ್ದರು ಎಂದು ವಾದಿಗಳ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಬೇರೆ ಸಿವಿಲ್ ಮತ್ತು ಕ್ರಿಮೀನಲ್ ಪ್ರಕರಣಗಳಲ್ಲಿ ಸಾಕ್ಷಿ ಹೇಳಿದ್ದೇನೆ ಎಂದರೆ ಸರಿಯಲ್ಲ. ರಾಣೇಬೆನ್ನೂರಿನ ಬಸಾಪುರ ಗ್ರಾಮದ ರುದ್ರಗೌಡ ಎನ್ನುವವರು ನನ್ನ ವಿರುದ್ಧ ಹರಿಹರದ ಸಿವಿಲ್ ನ್ಯಾಯಾಲಯದಲ್ಲಿ ನಾನು ಅಕ್ರಮ ಖಾತೆ ಮಾಡಿಕೊಂಡಿದ್ದೇನೆ ಎಂದು ಹೇಳಿ ದಾವೆ ಹಾಕಿದ್ದಾರೆ ಎಂದರೆ ಸಾಕ್ಷಿ ದಾವೆ ಇದೆ ಎಂದು ಹೇಳುತ್ತಾರೆ. ಈ ಪ್ರಕರಣದ ವಾದಿ ಪರ ವಕೀಲರು ಆ ದಾವೆಯಲ್ಲಿ ನನ್ನ ವಕೀಲರು ಇರುತ್ತಾರೆ. ಆ ಕಾರಣದಿಂದ ನಾನು ವಾದಿಯರ ಮಾತುಕೇಳಿ, ನನಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾ. ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚುಗೆ ಪಡಿಸಿದೆ).

ಓ ಹೇ ಕೇ ಸರಿ ಇದೆ.

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಹರಿಹರ.